‘ಈಗೇನು ಮಾಡಲು ಬಯಸುವಿರಿ? ಬಿಡುಗಡೆ ಪಡೆಯುವುದು ಕಷ್ಟವಾಗಲಿಕ್ಕಿಲ್ಲ...’ ಎಂದೆ.

‘ಇಲ್ಲ. ನನಗೆ ಅದು ಪರಿಹಾರ ಅನ್ನಿಸುವುದಿಲ್ಲ’ ಎಂದು ನನ್ನ ಸಲಹೆಯನ್ನು ತಳ್ಳಿ ಹಾಕಿದಳು. ಹಿಂದಿನ ಆಪ್ತಸಮಾಲೋಚನೆಯಅನುಭವವೇನನ್ನದಾದ್ದರಿಂದ ‘ಯಾವ ಕಾರಣಕ್ಕೆ ಬಿಡುಗಡೆ ಬೇಡವೆನ್ನಿಸುತ್ತೆ?’ ಎಂದು ಕೇಳಿದೆ. ಅವಳು ಯಾವುದೇ ಅನುಮಾನವಿಲ್ಲದೆ ‘ಮಗಳು...’ ಎಂದಳು. ನನಗೆ ಅಚ್ಚರಿಯಾಯ್ತು.

‘ನನ್ನೊಡನೆ ಅವನು ಸರಿಯಾಗಿ ನಡೆದುಕೊಂಡಿಲ್ಲ ಎಂಬ ಸಿಟ್ಟು ನನಗಿದೆ. ನನಗೆ ಅತೀವ ಅನ್ಯಾಯವಾಗಿದೆ ಎಂಬುದು ನಿಜ. ಆದರೆ ಅವನು ಮಗಳನ್ನು ಅತ್ಯಂತ ಪ್ರೀತಿಯಿಂದ ಸಲಹಿದ್ದಾನೆ. ಅವಳಿಗಾಗಿ ಜೀವ ಕೊಡಲೂ ಸಿದ್ಧವಿದ್ದಾನೆ. ಅದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ. ನನ್ನ ಒಳಿತಿನ ಸಲುವಾಗಿ ಮಗಳನ್ನು ಅಪ್ಪನಿಂದ ದೂರ ಮಾಡಲಾರೆ. ಅವಳ ಸಮೃದ್ಧ ಬೆಳವಣಿಗೆಗೆ ಅಪ್ಪನ ಪ್ರೀತಿ ಅತ್ಯಂತ ಅಗತ್ಯವಾದದ್ದು ಎಂಬ ಅರಿವು ನನಗಿದೆ. ನಾಳೆ ಅವಳನ್ನು ಒಳ್ಳೆಯ ವಿಶ್ವವಿದ್ಯಾಲಯಕ್ಕೆ ಸೇರಿಸಬೇಕು ಎಂದು ಆಲೋಚಿಸಿದ್ದೇವೆ. ಅಷ್ಟೊಂದು ಹಣ ನಾನೊಬ್ಬಳೇ ಭರಿಸುವುದು ಕಷ್ಟ. ಅವನೂ ಖಂಡಿತ ಜವಾಬ್ದಾರಿ ತೆಗೆದುಕೊಳ್ಳುತ್ತಾನೆ’ ಎಂದಳು.

‘ಕೆಲವೇ ದಿನಗಳಲ್ಲಿ ಅವಳಿಗೂ ಯೌವನ ಬರುತ್ತದೆ. ಅಪ್ಪ-ಅಮ್ಮನ ನಡುವಿನ ಸಂಬಂಧ ಎಂತಹದು ಎಂದು ಗೊತ್ತಾಗುತ್ತದೆ. ಜೊಳ್ಳು ಮದುವೆಯ ಜೊತೆ ಗುದ್ದಾಡಿದ ನಿಮ್ಮ ಅಧೈರ್ಯದ ಬಗ್ಗೆ ಅವಳಿಗೆ ತಿಳಿಯುತ್ತದೆ’ ನನ್ನ ಹಳೆಯ ಸಮಾಲೋಚನೆಯ ಅನುಭವದಿಂದ ಪ್ರಶ್ನೆ ಮೂಡಿ ಬಂದಿತ್ತು.

‘ತಿಳಿಯಲಿ ಬಿಡಿ. ಅದರಿಂದ ತಪ್ಪೇನೂ ಇಲ್ಲ. ಅಮ್ಮ ತನ್ನ ಸಲುವಾಗಿ ಬದುಕಲ್ಲಿ ಅದೆಷ್ಟು ತ್ಯಾಗ ಮಾಡಿದ್ದಾಳೆ ಎನ್ನುವ ಅರಿವು ಅವಳಿಗಾದರೆ, ನನ್ನ ಮೇಲಿನ ಅವಳ ಗೌರವ ಇಮ್ಮಡಿಯಾಗುತ್ತದೆ. ಹೇಗೂ ನನಗಾಗಲೆ ಐವತ್ತರ ಸನಿಹ. ಈಗ ದೈಹಿಕ ಬಯಕೆಗಳು ಮೊದಲಿನಂತೆ ಕಾಡುತ್ತಿಲ್ಲ. ಆದ್ದರಿಂದ ಹೊಂದಿಕೊಂಡು ಹೋಗಿ ಬಿಡುತ್ತೇನೆ. ಹೊಸ ಬದುಕನ್ನು ಪ್ರಾರಂಭಿಸುವ ಶಕ್ತಿ ಈಗಿಲ್ಲ’ ಎಂದಳು.

‘ಈಗ ಪತಿಯ ಬಗ್ಗೆ ಏನನ್ನಿಸುತ್ತದೆ?’ ಎಂದು ಕೆದಕಿದೆ. ಒಂದೆರಡು ನಿಮಿಷ ಯೋಚಿಸಿದಳು.

‘ನಿಜ ಹೇಳಬೇಕು ಅಂದರೆ ಅವನ ಬಗ್ಗೆ ಪಾಪ ಅನ್ನಿಸುತ್ತೆ. ಅವನು ಯಾರಾದರೂ ಚಂದದ ಹುಡುಗನನ್ನು ಜೊತೆ ಮಾಡಿಕೊಂಡು ಸಂತೋಷದಿಂದ ಬದುಕಬಹುದಿತ್ತು. ಆದರೆ ಅಮ್ಮನ ಭಯ ಮತ್ತು ಸಮಾಜದ ಅರಿವುಗೇಡಿತನಕ್ಕೆ ಬಲಿಯಾದ. ಧೀರೋದಾತ್ತವಾಗಿ ದೈಹಿಕ ಬಯಕೆಗಳನ್ನು ತೀರಿಸಿಕೊಳ್ಳುವ ವಯಸ್ಸಿನಲ್ಲಿ, ಕದ್ದು-ಮುಚ್ಚಿ ಒದ್ದಾಡಿದನಲ್ಲ ಅಂತ ದುಃಖವಾಗುತ್ತದೆ. ಅವನೂ ನನ್ನಷ್ಟೇ ಕಷ್ಟ ಪಟ್ಟಿದ್ದಾನೆ. ಪಾಪಪ್ರಜ್ಞೆಯ ಹಾದರವು ಅವನಿಗೆ ಯಾವ ಸುಖವನ್ನು ತಾನೇ ಕೊಟ್ಟೀತು? ಈಗಂತೂ ಸತ್ಯ ಗೊತ್ತಿರುವ ನನ್ನನ್ನು ಕಂಡರೆ ಸಾಕು, ಹೆದರಿಕೊಳ್ಳುತ್ತಾನೆ. ಶಾಲಾ ಮಾಸ್ತರರನ್ನು ಕಂಡ ವಿದ್ಯಾರ್ಥಿಯಂತೆ ವಿಧೇಯನಾಗಿ ತಲೆ ತಗ್ಗಿಸಿ ನಿಲ್ಲುತ್ತಾನೆ. ಯಾವ ಕೆಲಸ ಹೇಳಿದರೂ ಮಾಡುತ್ತಾನೆ. ಎಷ್ಟೋ ಕಾಟ ಕೊಡುವ ಗಂಡಸರಿಗಿಂತ ಇವನೊಡನೆ ಬಾಳುವುದು ಸುಲಭ ಅನ್ನಿಸುತ್ತಿದೆ’ ಎಂದಳು.

‘ಹಾಗೇ ಆಗಲಿ. ನಿಮಗೆ ಶುಭ ಕೋರುವೆ’ ಎಂದು ಸಮಾಲೋಚನೆ ಮುಗಿಸಿದೆ. ಆಕೆ ಕೊನೆಯಲ್ಲಿ ಮತ್ತೊಂದು ಬಯಕೆಯನ್ನು ನಿವೇದಿಸಿಕೊಂಡಳು. ‘ಯಾರಾದರೂ ಇದೇ ತರಹದ ಸಮಸ್ಯೆಯನ್ನು ಎದುರಿಸಿದವರು ನಿಮಗೆ ಗೊತ್ತಿದ್ದಾರೆಯೆ? ನಾನು ಅವರೊಡನೆ ಮಾತನಾಡಬಹುದೆ?’ ಎಂದಳು.

ಇಬ್ಬರು ವಿರುದ್ಧ ದಿಕ್ಕಿನಲ್ಲಿ ಚಲಿಸುವವರನ್ನು ಭೇಟಿ ಮಾಡಿಸಿದರೆ ಬರುವ ಫಲವಾದರೂ ಏನು? ಇಬ್ಬರಿಗೂ ಮನಸಿಗೆ ಕಿರಿಕಿರಿಯಾಗಬಹುದು. ಹೇಗೂ ಇಬ್ಬರೂ ತಮ್ಮ ತಮ್ಮ ನಿರ್ಧಾರಗಳನ್ನು ಮಾಡಿಕೊಂಡಾಗಿದೆ. ಇನ್ನು ಅದು ಬದಲಾಗುವುದೂ ಇಲ್ಲ. ಆದ್ದರಿಂದ ಈ ಭೇಟಿ ಬೇಡವೆಂದು ನನಗನ್ನಿಸಿತು.

‘ಇಲ್ಲ, ಆ ತರಹದವರು ನನಗೆ ಯಾರೂ ಗೊತ್ತಿಲ್ಲ’ ಎಂದು ಸುಳ್ಳು ಹೇಳಿದೆ. ●

ತ್ರಿಲೋಕ ಬರಹ ಪ್ರಕಾಶನ ಸಂಸ್ಥೆಯು ವಿಕ್ರಮ ಬಿ.ಕೆ. ಅವರ ಸಂಪಾದನೆಯಲ್ಲಿ ಲೈಂಗಿಕ ‘ಅಲ್ಪಸಂಖ್ಯಾತರು’ ವಿಷಯ ಕುರಿತು ಹೊರತಂದ ‘ಕಾಣುವಂತೆ ಕಾಣದಂತೆ’ ಕತೆ ಕವನಗಳ ಪುಸ್ತಕಕ್ಕಾಗಿ ಬರೆದ ಬರಹವಿದು. ಪ್ರತಿಗಳಿಗೆ: 7676625251